ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಬುಧವಾರ, ೦೩, ಜೂನ್, ೨೦೨೬ (ಜ್ಯೇಷ್ಠ, ೧೩, ಶಕವರ್ಷ, ೧೯೪೮) BENGALURU, WEDNESDAY, 03, JUNE, 2026 (JYAISTHA , 13, SHAKAVARSHA, 1948)	ನಂ. ೪೨೦ No. 420

No. LAW-LAC/127/2025

Karnataka Government Secretariat
Vidhana Soudha,
Dr.B.R.Ambedkar Veedhi,
Bengaluru, dated:03.06.2026

NOTIFICATION

Whereas the draft of "The Karnataka Subordinate Courts (Ministerial and Other Posts) (Absorption of Court Managers) (Special) Rules, 2025" was published in Notification No. LAW-LAC/127/2025, dated: 17.11.2025 in Part IV-A of the Karnataka Gazette Extraordinary dated 17.11.2025 inviting objections and suggestions from all persons likely to be affected thereby within fifteen days from the date of publication of the draft in the Official Gazette.

And Whereas, the said Gazette was made available to the public on 17.11.2025.

And whereas objections and suggestions received on this behalf have been considered by the State Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely: -

RULES

1. Title and Commencement and Application: -

[i] These Rules may be called "The Karnataka Subordinate Courts (Ministerial and Other Posts) (Absorption of Court Managers) (Special) Rules, 2025".

[ii] These Rules shall come into force from the date of publication in the Official Gazette.

[iii] These Rules are framed to provide a One-time measure for absorption of category of posts of Court Managers in the District Judiciary.

2. Definitions: - (1) In these Rules, unless the context otherwise requires:-

[a] "Appointing Authority" means the Registrar General, High Court of Karnataka;

[b] "Chief Justice" means the Chief Justice of the High Court of Karnataka;

[c] "Court Managers" means a person appointed as Court Managers on contract basis as per the recommendation of the 13th Finance Commission and as per the order/proceedings issued by the High Court of Karnataka vide Notification No.LCA-II-74/2011 BANGALORE dated 29.06.2013 and 12.06.2014 and who are in service on the date of commencement of these Rules as enumerated in Schedule-II.

[d] "District Judiciary" means the Courts established in various Judicial Districts in the State of Karnataka under the jurisdiction of the High Court of Karnataka;

[e] "District Judge" means Principal District and Sessions Judge of original jurisdiction in a Judicial District;

[f] "Government" means the Government of Karnataka;

[g] "High Court" means the High Court of Karnataka;

[h] "Judicial District" means the territorial area over which a Principal District and Sessions Judge exercises jurisdiction;

[i] "Recruitment Committee" means "Committee for recruitment of Court Managers of the High Court of Karnataka and District Judiciary" comprising of such number of sitting Judges of the High Court of Karnataka as nominated by the Chief Justice from time to time;

[j] "Registrar General" means the Registrar General of the High Court of Karnataka;

[k] "Schedule" means Schedule appended to these Rules.

(2) Other words and expressions used in these Rules, but not defined therein shall have the same meaning as in the Karnataka Civil Services (General Recruitment) Rules, 1977.

3. Absorption of Contract Court Managers in the Karnataka District Judiciary: -

[i] Notwithstanding anything in the Karnataka Civil Services (General Recruitment) Rules, 1977 and the Karnataka Subordinate Courts (Ministerial and other Posts) (Recruitment) Rules 1982 or in any other Rules made or deemed to have been made under the Karnataka State Civil Services Act, 1978 (Karnataka Act 14 of 1990), the incumbent Court Managers mentioned in the Schedule, who satisfy the conditions of eligibility and suitability specified in these Rules be absorbed against the sanctioned posts of Court Managers in the District Judiciary.

Provided that, no such person shall be absorbed, -

(i) if the person is disqualified for appointment under the Karnataka Civil Services (General Recruitment) Rules, 1977, except under Rule 6 thereof on the date of appointment as Court Manager on Contract Basis as the case may be;

(ii) if the person does not possess the minimum academic qualification, if any, specified in the rules of recruitment applicable for recruitment of such posts;

[ii] Eligibility Criteria:

The incumbent Court Managers presently working on a contract basis in the establishment of District Judiciary shall -

[a] possess a Bachelor Degree in any stream with Masters in Business Administration from University or Institution in India recognized by the University Grants Commission,

[b] have completed five years of continuous service on contract basis in the post of Court Manager in the District Judiciary,

[c] possess skills in administration and computer application.

[iii] Suitability Test:

The suitability of a Court Manager for absorption shall be assessed:

[a] in Viva-voce:

[i] The viva-voce shall carry maximum 50 marks with 25 as qualifying marks.

[ii] The candidate's knowledge shall be tested for duties and responsibilities as mentioned in Schedule-II.

[b] on a Report of the Principal District and Sessions Judges of the District Judiciary for five years.

Provided that if a Court Manager has worked in different Judicial District in the last five years, a report from the Principal District and Sessions Judge of each of those Districts.

[iv] The incumbent Court Manager who is qualified and willing to get absorbed under these Rules shall make an application to the Appointing Authority, High Court of Karnataka, within thirty days from the date of commencement of these Rules expressing willingness to get absorbed in the District Judiciary.

[v] The Appointing Authority, High Court of Karnataka, on receipt of the application from the Court Manager, shall examine the eligibility of the applicant and shall appoint such applicant against the sanctioned posts subject to suitability under these Rules.

[vi] The absorption shall commence from the date of their initial recruitment on contractual basis.

4. Class and Cadre:

The service shall consist of the following Class and Cadre:

Court Manager:
Class: Class-II
Cadre: Group 'B'

5. Pay, Leave and Seniority of Court Managers absorbed under these Rules: -

Notwithstanding anything contained in the Karnataka Civil Services Rules: -

[i] The initial basic pay of a person absorbed under these Rules shall be fixed at the minimum of the pay scale of the post to which he is absorbed from the date of his entry into service on contractual basis.

[**Note**: 'Minimum of the pay scale' means minimum of pay scale of the Group-B post in the pay scale of Rs.22800-43200 existed at the time of entry into service of the persons on contractual basis]

[ii] The service rendered as contract employee prior to the date of absorption shall count for the purpose of leave, pay and seniority, new pension scheme as defined by the Government from time to time shall be applicable to the persons absorbed under these Rules.

[iii] The Court Managers absorbed under these Rules shall not be entitled to any arrears of salary benefits from the date of their initial appointment till the date of their actual regularization.

[iv] The inter se seniority of applicants absorbed under these Rules shall be determined on the basis of the number of days of actual service as Contract Court Managers and among the applicants, who have worked for equal number of days, the applicant older in age shall be treated as senior to an applicant, who is younger.

6. Duties and Responsibilities:

The Court Manager shall discharge and perform duties that may be assigned to him or her by the Principal District and Sessions Judge as enumerated in Schedule–II appended to these Rules.

7. Application of other Rules: -

The provisions of the Karnataka State Civil Services Act, 1978 and Rules framed there-under, the Karnataka Civil Services (General Recruitment) Rules, 1977, the Karnataka Civil Services (Conduct) Rules, 2021, and all other Rules regulating the conditions of service of Government Servants shall apply to persons absorbed under these Rules.

By order and in the name of
Governor of Karnataka

Sd/-
(Prabhavathi T.R)
Under Secretary to Government,
Law, Justice and Human Rights
Department (Admin-1)

SCHEDULE-I

The Court Manager in the District Judiciary of the State shall be assigned to perform the following duties-

A. Information & Statistics

[1] The Court Manager shall monitor the operation of the Information Technology Systems of the Courts in the Judicial District.

[2] The Court Manager shall monitor prompt and accurate compilation of statistics in the format supplied by the Court.

[3] The Court Manager shall render necessary assistance in preparing monthly, quarterly and other statements relating to pendency, institution and disposal of cases.

[4] The Court Manager in coordination with the System Officer of the District, shall monitor uploading of the relevant statistics in the official website of the District Judiciary.

[5] The Court Manager shall monitor the implementation of e-Project.

[6] The Court Manager shall monitor the Case Information System (CIS) and Case Management System (CMS).

[7] The Court Manager shall monitor that the judgments and orders of the Courts are uploaded in the website without any delay.

[8] The Court Manager shall furnish all information on institution and disposal of cases in the District to the National Judicial Data Grid.

[9] The Court Manager shall co-ordinate for imparting computer training to the ministerial staff in coordination with the Karnataka Judicial Academy.

B. Infrastructure

[1] The Court Manager may, in consultation with the stakeholders of a Court (including the Bar, Ministerial Staff, Executive Agencies supporting judicial functions, such as prosecutors/police/process serving agencies and court users), prepare and update annually a Five-year Court wise Court Development Plan (CDP).

[2] The Court Manager shall monitor the implementation of the CDP and report to the Principal District and Sessions Judge on its progress.

[3] The Court Manager shall monitor the matters relating to the infrastructure of Courts and residential quarters with the Public Works Department and other authorities.

[4] The Court Manager shall apprise the District Level Monitoring Committee on the infrastructure development of the District.

C. Record Management

[1] The Court Manager shall monitor the transmission of the disposed of records to the District Record Room without delay.

[2] The Court Manager shall monitor the destruction of the records as per High Court Rules.

[3] The Court Manager shall monitor the maintenance and classification of records of the Court with the assistance of the concerned Sheristedar.

D. Inspection of Nazarat Section

The Court Manager shall undertake weekly inspection of the Nazarat Section to monitor the service of process of the Courts.

E. Protocol Duty

[1] The Court Manager shall attend to the protocol duties during visit of Judges of the Supreme Court and the High Court and other Dignitaries.

[2] The Court Manager shall take necessary instructions from the Principal District and Sessions Judge.

[3] The Court Manager shall ensure accommodation for the Judicial Officers in the circuit house/guest house on reporting to duty.

F. Human Resource Management

The Court Manager shall recommend plan of action for compliance with the Human Resource Management Standard and Practices established by the High Court.

G. Other Duties

[1] The Court Manager shall monitor the process and procedures of the Court for filing, issuing certified copies, access to information and documents and grievance redressal in consonance with the policies and standards established by the High Court for Court management.

[2] The Court Manager shall monitor the core systems of the Court, such as, documentation management, utilities management, infrastructure and facilities management, financial systems management, etc., to function effectively.

[3] The Court Manager shall ensure cleanliness of the Court premises on instructions from the Principal District and Sessions Judge and take steps for improving the surroundings of the Court premises.

[4] Court Manager shall place all communications/letters from the Supreme Court or the High Court, with appropriate note, before the Principal District and Sessions Judge and shall take necessary steps as per instructions.

[5] The Court Manager shall supervise power facility, telephone, internet connectivity in the Courts and residential quarters of the Judicial Officers.

SCHEDULE-II

Sl. No.	Name of the Court Managers	Present Place of working	Date of birth	Qualifying Percentage MBA	Date of Joining	Qualification	Caste
2013							
1	Sri Shivakumar	Bidar	01.06.1977	72	11.07.2013	MBA	Christian Cat III'B'
2	Sri.Subashchandra Sankannavar	D.K. Mangaluru	28.01.1979	59.55	19.07.2013	BBA & MBA	Hindu Lingayat
3	Sri.Suresh Rathod	Belagavi	11.06.1977	53	12.07.2013	MBA	Banjara (Lambani)
4	Sri Anil Kumar D.	Ramanagara	22.02.1980	63	19.08.2013	BBM & MBA	Kunchitiga III-A
5	Sri.Katte Basappa H	Koppal	16.03.1979	61.83	11.09.2013	B.Com MBA (Finance and Marketing) Pursuing L.L.B	Banajiga III-B

6	Sri Praveen Kumar Hiremath,	Raichur	15.08.1982	57	10.07.2013	B.Sc, MBA, B.Ed	Lingayat Cat III(B)
7	Sri Ranganath Kale	Vijayapura	20.06.1976	55	10.07.2013	B.Com and MBA	Holer (SC)
			2014				
8	Sri Vijayamahantha swamy	Bengaluru Rural	07.06.1975	61.67	23.06.2014	M.A (English), MBA(HR & Administration)	Hindu Veerashaiva
9	Sri Ram Gowda M	Mysuru	04.05.1984	67.21	25.06.2014	LLB, MBA (Finance and Marketing) and LLM (Business Law)	Gowdas Cat-III (A)
10	Sri Birappa Doni	Bagalkot	08.06.1984	57.1	19.06.2014	B.Com MBA PGDCA	Hindu Kuruba Cat-II (A)
11	Sri Ravindra K. Patil	Kalaburagi	12.04.1981	63	01.07.2014	MBA	Veerashaiva Lingayat
12	Sri Eresh A.	Ballari	16.10.1979	61.68	26.06.2014	MBA and BBM (Finance)	Hindu, Lingayath
13	Sri Zainul Abideen Turki	Dharwad	20.05.1985	60.62	26.06.2014	MBA (Marketing)	Muslim
14	Smt. Nandini G.J.	Mandya	24.08.1985	64.13	04.07.2014	B.Com MBA (HR & Finance)	Balija (Banajiga)
15	Sri Shivaraj	Udupi	02.11.1979	57.2	25.09.2014	B.Com, MBA	Hindu, Lingayath

By order and in the name of
Governor of Karnataka

Sd/-
(Prabhavathi T.R)
Under Secretary to Government,
Law, Justice and Human Rights
Department (Admin-1)

ಕರ್ನಾಟಕ ಸರ್ಕಾರ

ಸಂಖ್ಯೆ. ಲಾ -ಎಲ್‌ಎಸಿ/127/2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:03.06.2026

ಅಧಿಸೂಚನೆ

ಕರ್ನಾಟಕ ಅಧೀನ ನ್ಯಾಯಾಲಯಗಳು (ಲಿಪಿಕ ಮತ್ತು ಇತರ ಹುದ್ದೆಗಳು) (ನ್ಯಾಯಾಲಯ ವ್ಯವಸ್ಥಾಪಕರ ವಿಲೀನಗೊಳಿಸುವಿಕೆ) (ವಿಶೇಷ) ನಿಯಮಗಳು, 2025 ಅನ್ನು ಜಾರಿಗೆ ತರುವುದಕ್ಕೆ ದಿನಾಂಕ:17.11.2025ರ ಅಧಿಸೂಚನೆ ಸಂಖ್ಯೆ ಲಾ-ಎಲ್‌ಎಸಿ/127/2025 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 17.11.2025 ರ ಕರ್ನಾಟಕ ರಾಜ್ಯಪತ್ರದ ಭಾಗ IV-ಎ ರಲ್ಲಿ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 17.11.2025 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ನಿಯಮಗಳ ಬಗ್ಗೆ ಆಕ್ಷೇಪಣೆ ಮತ್ತು ಸಲಹೆಗಳು ಸ್ವೀಕೃತವಾಗಿದ್ದು ಅವುಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ;

ಈಗ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ 14)ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

1. ಚಿಕ್ಕ ಹೆಸರು, ಪ್ರಾರಂಭ ಮತ್ತು ಅನ್ವಯ:-

(i) ಈ ನಿಯಮಗಳನ್ನು "ಕರ್ನಾಟಕ ಅಧೀನ ನ್ಯಾಯಾಲಯಗಳು (ಲಿಪಿಕ ಮತ್ತು ಇತರ ಹುದ್ದೆಗಳು) (ನ್ಯಾಯಾಲಯ ವ್ಯವಸ್ಥಾಪಕರ ವಿಲೀನಗೊಳಿಸುವಿಕೆ) (ವಿಶೇಷ) ನಿಯಮಗಳು, 2025" ಎಂದು ಕರೆಯತಕ್ಕದ್ದು.

(ii) ಈ ನಿಯಮಗಳು ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(iii) ಜಿಲ್ಲಾ ನ್ಯಾಯಾಲಯಗಳಲ್ಲಿ ನ್ಯಾಯಾಲಯ ವ್ಯವಸ್ಥಾಪಕರ ಹುದ್ದೆಗಳ ಪ್ರವರ್ಗವನ್ನು ವಿಲೀನಗೊಳಿಸುವಿಕೆಗೆ ಒಂದು ಬಾರಿಯ ಕ್ರಮವನ್ನು ಉಪಬಂಧಿಸಲು ಈ ನಿಯಮಗಳನ್ನು ರಚಿಸಲಾಗಿದೆ.

2. ಪರಿಭಾಷೆಗಳು.-

ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನೇಮಕಾತಿ ಪ್ರಾಧಿಕಾರ" ಎಂದರೆ, ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ;

(ಬಿ) "ಮುಖ್ಯ ನ್ಯಾಯಮೂರ್ತಿ" ಎಂದರೆ, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ;

(ಸಿ) "ನ್ಯಾಯಾಲಯ ವ್ಯವಸ್ಥಾಪಕರು" ಎಂದರೆ, 13ನೇ ಹಣಕಾಸು ಆಯೋಗದ ಶಿಫಾರಸಿನ ಅನುಸಾರ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಹೊರಡಿಸಿದ ಆದೇಶ/ವ್ಯವಹರಣೆಗಳ ಅಧಿಸೂಚನೆ ಸಂಖ್ಯೆ ಎಲ್‌ಸಿಎ-II-74/2011, ಬೆಂಗಳೂರು, ದಿನಾಂಕ: 29.06.2013 ಮತ್ತು 12.06.2014 ರಂತೆ ಗುತ್ತಿಗೆ ಆಧಾರದ ಮೇಲೆ ನ್ಯಾಯಾಲಯ ವ್ಯವಸ್ಥಾಪಕರಾಗಿ ನೇಮಕಗೊಂಡ ಮತ್ತು ಅನುಸೂಚಿ-II ರಲ್ಲಿ ನಮೂದಿಸಿರುವಂತೆ ಈ ನಿಯಮಗಳ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿರುವಂಥ ವ್ಯಕ್ತಿ.

(ಡಿ) "ಜಿಲ್ಲಾ ನ್ಯಾಯಾಂಗ" ಎಂದರೆ, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಅಡಿಯಲ್ಲಿ ಬರುವ ಕರ್ನಾಟಕ ರಾಜ್ಯದಲ್ಲಿನ ವಿವಿಧ ನ್ಯಾಯಿಕ ಜಿಲ್ಲೆಗಳಲ್ಲಿ ಸ್ಥಾಪಿಸಲಾದ ನ್ಯಾಯಾಲಯಗಳು;

(ಇ) "ಜಿಲ್ಲಾ ನ್ಯಾಯಾಧೀಶರು" ಎಂದರೆ, ನ್ಯಾಯಿಕ ಜಿಲ್ಲೆಯಲ್ಲಿನ ಮೂಲ ಅಧಿಕಾರ ವ್ಯಾಪ್ತಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು;

(ಎಫ್) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಜಿ) "ಉಚ್ಚ ನ್ಯಾಯಾಲಯ" ಎಂದರೆ, ಕರ್ನಾಟಕ ಉಚ್ಚ ನ್ಯಾಯಾಲಯ;

(ಹೆಚ್) "ನ್ಯಾಯಿಕ ಜಿಲ್ಲೆ" ಎಂದರೆ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಪ್ರಾದೇಶಿಕ ಪ್ರದೇಶ;

(ಐ) "ನೇಮಕಾತಿ ಸಮಿತಿ" ಎಂದರೆ, ಮುಖ್ಯ ನ್ಯಾಯಾಧೀಶರು ಕಾಲಕಾಲಕ್ಕೆ ನಾಮನಿರ್ದೇಶನ ಮಾಡಿದಷ್ಟು ಸಂಖ್ಯೆಯ ಕರ್ನಾಟಕ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರನ್ನೊಳಗೊಂಡ "ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಜಿಲ್ಲಾ ನ್ಯಾಯಾಲಯದ ನ್ಯಾಯಾಲಯ ವ್ಯವಸ್ಥಾಪಕರ ನೇಮಕಾತಿಗೆ ಸಂಬಂಧಿಸಿದ ಸಮಿತಿ";

(ಜೆ) "ರಿಜಿಸ್ಟ್ರಾರ್ ಜನರಲ್" ಎಂದರೆ, ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್;

(ಕೆ) "ಅನುಸೂಚಿ" ಎಂದರೆ, ಈ ನಿಯಮಗಳಿಗೆ ಅನುಬಂಧಿಸಲಾದ ಅನುಸೂಚಿ;

(2) ಈ ನಿಯಮಗಳಲ್ಲಿ ಬಳಸಿದ ಆದರೆ ಪರಿಭಾಷಿಸಿರದ ಇತರ ಪದಗಳು ಮತ್ತು ಪದಾವಳಿಗಳು ಇದರಲ್ಲಿ ಇನ್ನು ಮುಂದೆ ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿರುವಂಥ ಅರ್ಥವನ್ನೇ ಹೊಂದಿರತಕ್ಕದ್ದು.

3. ಕರ್ನಾಟಕ ಜಿಲ್ಲಾ ನ್ಯಾಯಾಲಯದಲ್ಲಿನ ಗುತ್ತಿಗೆ ನ್ಯಾಯಾಲಯ ವ್ಯವಸ್ಥಾಪಕರನ್ನು ವಿಲೀನಗೊಳಿಸುವಿಕೆ:-

(i) ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಮತ್ತು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) ನಿಯಮಗಳು, 1982ರಲ್ಲಿ ಅಥವಾ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ ಅಡಿಯಲ್ಲಿ ರಚಿಸಲಾದ ಅಥವಾ ರಚಿಸಲಾಗಿದೆಯೆಂದು ಭಾವಿಸಲಾದ ಯಾವುದೇ ಇತರ ನಿಯಮಗಳಲ್ಲಿ ಏನೇ ಇದ್ದರೂ, ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆ ಮತ್ತು ಯೋಗ್ಯತಾ ಷರತ್ತುಗಳನ್ನು ಪೂರೈಸುವಂಥ ಅನುಸೂಚಿಯಲ್ಲಿ ಹೆಸರಿಸಿರುವ ಹಾಲಿ ಇರುವ ನ್ಯಾಯಾಲಯ ವ್ಯವಸ್ಥಾಪಕರನ್ನು ಜಿಲ್ಲಾ ನ್ಯಾಯಾಲಯದಲ್ಲಿ ಮಂಜೂರಾದ ನ್ಯಾಯಾಲಯ ವ್ಯವಸ್ಥಾಪಕರ ಹುದ್ದೆಗಳಿಗೆ ವಿಲೀನಗೊಳಿಸಲಾಗುತ್ತದೆ.

ಪರಂತು, ಯಾರೇ ಅಂಥ ವ್ಯಕ್ತಿಯು,-

(i) ಸಂದರ್ಭಾನುಸಾರ ಗುತ್ತಿಗೆ ಆಧಾರದ ಮೇಲೆ ನ್ಯಾಯಾಲಯದ ವ್ಯವಸ್ಥಾಪಕರಾಗಿ ನೇಮಕಗೊಂಡ ದಿನಾಂಕದಂದು ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಅಡಿಯಲ್ಲಿ, ಅದರ ನಿಯಮ 6ರ ಅಡಿಯಲ್ಲಿ ಹೊರತುಪಡಿಸಿ, ನೇಮಕಾತಿಗಾಗಿ ಅನರ್ಹಗೊಂಡರೆ;

(ii) ಅಂಥ ಹುದ್ದೆಗಳ ನೇಮಕಾತಿಗೆ ಅನ್ವಯವಾಗುವ ನೇಮಕಾತಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಶೈಕ್ಷಣಿಕ ಅರ್ಹತೆ ಯಾವುದಾದರೂ ಇದ್ದು, ಅಂಥ ಕನಿಷ್ಠ ಶೈಕ್ಷಣಿಕ ಅರ್ಹತೆ ಹೊಂದಿಲ್ಲದಿದ್ದರೆ;

– ಅಂಥ ವ್ಯಕ್ತಿಯನ್ನು ವಿಲೀನಗೊಳಿಸತಕ್ಕದ್ದಲ್ಲ.

(ii) ಅರ್ಹತಾ ಮಾನದಂಡ:

ಜಿಲ್ಲಾ ನ್ಯಾಯಾಲಯ ಕಾರ್ಯಸಂಸ್ಥೆಯಲ್ಲಿ ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಹಾಲಿ ನ್ಯಾಯಾಲಯ ವ್ಯವಸ್ಥಾಪಕರು,-

(ಎ) ವಿಶ್ವವಿದ್ಯಾನಿಲಯ ಅನುದಾನ ಆಯೋಗದಿಂದ ಮಾನ್ಯತೆ ಪಡೆದ ಭಾರತದ ವಿಶ್ವವಿದ್ಯಾಲಯ ಅಥವಾ ಸಂಸ್ಥೆಯಿಂದ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಸ್ನಾತಕ ಪದವಿ ಹೊಂದಿರತಕ್ಕದ್ದು,

(ಬಿ) ಜಿಲ್ಲಾ ನ್ಯಾಯಾಲಯದಲ್ಲಿ ನ್ಯಾಯಾಲಯ ವ್ಯವಸ್ಥಾಪಕರ ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಐದು ವರ್ಷಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿರತಕ್ಕದ್ದು,

(ಸಿ) ಅಡ್ಮಿನಿಸ್ಟ್ರೇಷನ್ ಮತ್ತು ಕಂಪ್ಯೂಟರ್ ಅಪ್ಲಿಕೇಶನ್ ವಿಷಯಗಳಲ್ಲಿ ಕೌಶಲ್ಯಗಳನ್ನು ಹೊಂದಿರತಕ್ಕದ್ದು.

(iii) ಸೂಕ್ತತಾ (Suitability) ಪರೀಕ್ಷೆ:

ವಿಲೀನಗೊಳಿಸುವಿಕೆಗಾಗಿ ನ್ಯಾಯಾಲಯದ ವ್ಯವಸ್ಥಾಪಕರ ಸೂಕ್ತತೆ;

(ಎ) ಮೌಖಿಕ-ಪರೀಕ್ಷೆ:

(i) ಮೌಖಿಕ ಪರೀಕ್ಷೆಯು ಗರಿಷ್ಠ 50 ಅಂಕಗಳನ್ನು ಹೊಂದಿದ್ದು, 25 ಅಂಕಗಳು ಅರ್ಹತಾ ಅಂಕಗಳಾಗಿರತಕ್ಕದ್ದು.

(ii) ಅನುಸೂಚಿ-IIರಲ್ಲಿ ತಿಳಿಸಿರುವ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಯ ಜ್ಞಾನವನ್ನು ಪರೀಕ್ಷಿಸತಕ್ಕದ್ದು.

(ಬಿ) ಜಿಲ್ಲಾ ನ್ಯಾಯಾಲಯದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಐದು ವರ್ಷಗಳ ಅವಧಿಯ ವರದಿಯನ್ನು ಆಧರಿಸಿ

– ಮೌಲ್ಯಮಾಪನ ಮಾಡತಕ್ಕದ್ದು:

ಪರಂತು, ನ್ಯಾಯಾಲಯ ವ್ಯವಸ್ಥಾಪಕರು ಕಳೆದ ಐದು ವರ್ಷಗಳಲ್ಲಿ ವಿವಿಧ ನ್ಯಾಯಿಕ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಿದ್ದರೆ, ಅಂಥ ವ್ಯವಸ್ಥಾಪಕರು ಆ ಪ್ರತಿಯೊಂದು ಜಿಲ್ಲೆಗಳ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಂದ ವರದಿಯನ್ನು ಪಡೆದಿರಬೇಕು.

(iv) ಈ ನಿಯಮಗಳ ಅಡಿಯಲ್ಲಿ ವಿಲೀನಗೊಳ್ಳಲು ಅರ್ಹರಿರುವ ಮತ್ತು ಇಚ್ಛೆಯುಳ್ಳ ಹಾಲಿ ನ್ಯಾಯಾಲಯ ವ್ಯವಸ್ಥಾಪಕರು, ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಜಿಲ್ಲಾ ನ್ಯಾಯಾಲಯದಲ್ಲಿ ವಿಲೀನಗೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿ ಕರ್ನಾಟಕ ಉಚ್ಚ ನ್ಯಾಯಾಲಯದ ನೇಮಕಾತಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(v) ಕರ್ನಾಟಕ ಉಚ್ಚ ನ್ಯಾಯಾಲಯದ ನೇಮಕಾತಿ ಪ್ರಾಧಿಕಾರವು, ನ್ಯಾಯಾಲಯ ವ್ಯವಸ್ಥಾಪಕರಿಂದ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅರ್ಜಿದಾರರ ಅರ್ಹತೆಯನ್ನು ಪರಿಶೀಲಿಸತಕ್ಕದ್ದು ಮತ್ತು ಈ ನಿಯಮಗಳ ಮೇರೆಗಿನ ಅರ್ಹತೆಗೆ ಒಳಪಟ್ಟು ಮಂಜೂರಾದ ಹುದ್ದೆಗಳಿಗೆ ಅಂತಹ ಅರ್ಜಿದಾರರನ್ನು ನೇಮಿಸತಕ್ಕದ್ದು.

(vi) ವಿಲೀನಗೊಳಿಸುವಿಕೆಯು ಗುತ್ತಿಗೆ ಆಧಾರದ ಮೇಲೆ ಅವರು ಆರಂಭಿಕವಾಗಿ ನೇಮಕಗೊಂಡ ದಿನಾಂಕದಿಂದ ಪ್ರಾರಂಭವಾಗತಕ್ಕದ್ದು.

4. ವರ್ಗ ಮತ್ತು ವೃಂದ:

ಈ ಸೇವೆಯು ಈ ಕೆಳಕಂಡ ವರ್ಗ ಮತ್ತು ವೃಂದವನ್ನು ಒಳಗೊಂಡಿರತಕ್ಕದ್ದು:

ನ್ಯಾಯಾಲಯ ವ್ಯವಸ್ಥಾಪಕರು:
ವರ್ಗ: ವರ್ಗ-II
ವೃಂದ: ಸಮೂಹ 'ಬಿ'

5. ಈ ನಿಯಮಗಳ ಅಡಿಯಲ್ಲಿ ವಿಲೀನಗೊಂಡ ನ್ಯಾಯಾಲಯ ವ್ಯವಸ್ಥಾಪಕರ ವೇತನ, ರಜೆ ಮತ್ತು ಜ್ಯೇಷ್ಠತೆ:-

ಕರ್ನಾಟಕ ನಾಗರಿಕ ಸೇವಾ ನಿಯಮಗಳಲ್ಲಿ ಏನೇ ಇದ್ದರೂ:-

(i) ಈ ನಿಯಮಗಳ ಅಡಿಯಲ್ಲಿ ವಿಲೀನಗೊಂಡ ಒಬ್ಬ ವ್ಯಕ್ತಿಯ ಆರಂಭಿಕ ಮೂಲ ವೇತನವನ್ನು ಆ ವ್ಯಕ್ತಿಯು ಗುತ್ತಿಗೆ ಆಧಾರದ ಮೇಲೆ ಸೇವೆಗೆ ಸೇರಿದ ದಿನಾಂಕದಿಂದ ಆತನು ವಿಲೀನಗೊಂಡಂಥ ಹುದ್ದೆಯ ಕನಿಷ್ಠ ವೇತನ ಶ್ರೇಣಿಗೆ ನಿಗದಿಪಡಿಸತಕ್ಕದ್ದು.

[**ಸೂಚನೆ:** 'ಕನಿಷ್ಠ ವೇತನ ಶ್ರೇಣಿ' ಎಂದರೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ವ್ಯಕ್ತಿಗಳು ಸೇವೆಗೆ ಸೇರಿದ ಸಂದರ್ಭದಲ್ಲಿ ಗ್ರೂಪ್-ಬಿ ವೃಂದದ ವೇತನ ಶ್ರೇಣಿ ರೂ.22800-43200 ರಲ್ಲಿನ ಕನಿಷ್ಠ ವೇತನ ಶ್ರೇಣಿ]

(ii) ವಿಲೀನಗೊಳಿಸುವಿಕೆಯ ದಿನಾಂಕಕ್ಕೆ ಮುಂಚೆ ಗುತ್ತಿಗೆ ಉದ್ಯೋಗಿಯಾಗಿ ಸಲ್ಲಿಸಿದ ಸೇವೆಯನ್ನು ರಜೆ, ವೇತನ ಮತ್ತು ಜೇಷ್ಠತೆಯ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಸರ್ಕಾರವು ಕಾಲಕಾಲಕ್ಕೆ ಪರಿಭಾಷಿಸಿದಂತೆ ಹೊಸ ಪಿಂಚಣಿ ಯೋಜನೆಯು ಈ ನಿಯಮಗಳ ಅಡಿಯಲ್ಲಿ ವಿಲೀನಗೊಂಡ ವ್ಯಕ್ತಿಗಳಿಗೂ ಅನ್ವಯವಾಗತಕ್ಕದ್ದು.

(iii) ಈ ನಿಯಮಗಳ ಅಡಿಯಲ್ಲಿ ವಿಲೀನಗೊಂಡ ನ್ಯಾಯಾಲಯ ವ್ಯವಸ್ಥಾಪಕರು ತಮ್ಮ ಆರಂಭಿಕ ನೇಮಕಾತಿಯ ದಿನಾಂಕದಿಂದ ತಮ್ಮ ನೈಜ ಖಾಯಮಾತಿಗೊಂಡ ದಿನಾಂಕದವರೆಗೆ ಯಾವುದೇ ವೇತನ ಬಾಕಿ ಪ್ರಯೋಜನಗಳಿಗೆ ಹಕ್ಕುಳ್ಳವರಾಗಿರತಕ್ಕದ್ದಲ್ಲ.

(iv) ಈ ನಿಯಮಗಳ ಅಡಿಯಲ್ಲಿ ವಿಲೀನಗೊಂಡ ಅರ್ಜಿದಾರರ ಆಂತರಿಕ-ಜ್ಯೇಷ್ಠತೆಯನ್ನು ಗುತ್ತಿಗೆ ನ್ಯಾಯಾಲಯ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ ನೈಜ ಸೇವಾ ದಿನಗಳ ಸಂಖ್ಯೆಯ ಆಧಾರದ ಮೇಲೆ ನಿರ್ಧರಿಸತಕ್ಕದ್ದು ಮತ್ತು ಸಮಾನ ಸಂಖ್ಯೆಯ ದಿನಗಳ ಕಾಲ ಕಾರ್ಯನಿರ್ವಹಿಸಿದಂಥ ಅರ್ಜಿದಾರರ ಪೈಕಿ, ಹೆಚ್ಚು ವಯಸ್ಸಿನ ಅರ್ಜಿದಾರನನ್ನು ಕಡಿಮೆ ವಯಸ್ಸಿನ ಅರ್ಜಿದಾರರಿಗಿಂತ ಜ್ಯೇಷ್ಠತೆಯಲ್ಲಿ ಹಿರಿಯವನಾಗಿ ಪರಿಗಣಿಸತಕ್ಕದ್ದು.

6. ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು:

ನ್ಯಾಯಾಲಯ ವ್ಯವಸ್ಥಾಪಕರು ಈ ನಿಯಮಗಳಿಗೆ ಅನುಬಂಧಿಸಲಾದ ಅನುಸೂಚಿ-IIರಲ್ಲಿ ನಮೂದಿಸಿರುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಆತನಿಗೆ ಅಥವಾ ಆಕೆಗೆ ನಿಯೋಜಿಸಬಹುದಾದಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಹೊಣೆಗಾರಿಕೆಗಳನ್ನು ನೆರವೇರಿಸತಕ್ಕದ್ದು.

7. ಇತರ ನಿಯಮಗಳ ಅನ್ವಯ:

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮ, 1978ರ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು, ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977, ಕರ್ನಾಟಕ ನಾಗರಿಕ ಸೇವೆಗಳ (ನಡತೆ) ನಿಯಮಗಳು, 2021 ಮತ್ತು ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ವಿನಿಯಮಿಸುವ ಇತರ ಎಲ್ಲಾ ನಿಯಮಗಳು ಈ ನಿಯಮಗಳ ಅಡಿಯಲ್ಲಿ ವಿಲೀನಗೊಂಡ ವ್ಯಕ್ತಿಗಳಿಗೆ ಅನ್ವಯವಾಗತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/-
(ಪ್ರಭಾವತಿ ಟಿ.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ
ಇಲಾಖೆ (ಆಡಳಿತ-1)

ಅನುಸೂಚಿ-I

ರಾಜ್ಯದ ಜಿಲ್ಲಾ ನ್ಯಾಯಾಲಯದಲ್ಲಿನ ನ್ಯಾಯಾಲಯ ವ್ಯವಸ್ಥಾಪಕರನ್ನು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಲು ನಿಯೋಜಿಸತಕ್ಕದ್ದು:-

ಎ. ಮಾಹಿತಿ ಮತ್ತು ಅಂಕಿಅಂಶಗಳು

(1) ನ್ಯಾಯಾಲಯ ವ್ಯವಸ್ಥಾಪಕರು ನ್ಯಾಯಿಕ ಜಿಲ್ಲೆಯಲ್ಲಿನ ನ್ಯಾಯಾಲಯಗಳ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳ ಕಾರ್ಯಾಚರಣೆಯ ಮೇಲ್ವಿಚಾರಣೆ ಮಾಡತಕ್ಕದ್ದು.

(2) ನ್ಯಾಯಾಲಯ ವ್ಯವಸ್ಥಾಪಕರು ನ್ಯಾಯಾಲಯವು ಸರಬರಾಜು ಮಾಡಿದ ನಮೂನೆಯಲ್ಲಿ ಅಂಕಿಅಂಶಗಳ ನೈಜ ಮತ್ತು ನಿಖರ ಸಂಕಲನವನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(3) ನ್ಯಾಯಾಲಯ ವ್ಯವಸ್ಥಾಪಕರು ಮೊಕದ್ದಮೆಗಳ ಇತ್ಯರ್ಥ, ಹೂಡಿಕೆ ಮತ್ತು ವಿಲೇವಾರಿಗೆ ಸಂಬಂಧಿಸಿದ ಮಾಸಿಕ, ತ್ರೈಮಾಸಿಕ ಮತ್ತು ಇತರ ವಿವರಗಳನ್ನು ಸಿದ್ಧಪಡಿಸುವಲ್ಲಿ ಅಗತ್ಯ ಸಹಾಯವನ್ನು ಮಾಡತಕ್ಕದ್ದು.

(4) ನ್ಯಾಯಾಲಯ ವ್ಯವಸ್ಥಾಪಕರು ಜಿಲ್ಲೆಯ ಸಿಸ್ಟಮ್ ಅಧಿಕಾರಿಯ ಸಮನ್ವಯದೊಂದಿಗೆ ಜಿಲ್ಲಾ ನ್ಯಾಯಾಲಯದ ಅಧಿಕೃತ ಜಾಲತಾಣಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಅಪ್ಲೋಡ್ ಮಾಡುವುದನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(5) ನ್ಯಾಯಾಲಯ ವ್ಯವಸ್ಥಾಪಕರು ಇ-ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(6) ನ್ಯಾಯಾಲಯ ವ್ಯವಸ್ಥಾಪಕರು ಮೊಕದ್ದಮೆ ಮಾಹಿತಿ ವ್ಯವಸ್ಥೆ (ಸಿಐಎಸ್) ಮತ್ತು ಮೊಕದ್ದಮೆ ನಿರ್ವಹಣೆ ವ್ಯವಸ್ಥೆ (ಸಿಎಂಎಸ್) ಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(7) ನ್ಯಾಯಾಲಯ ವ್ಯವಸ್ಥಾಪಕರು ನ್ಯಾಯಾಲಯಗಳ ತೀರ್ಪುಗಳು ಮತ್ತು ಆದೇಶಗಳನ್ನು ಯಾವುದೇ ವಿಳಂಬವಿಲ್ಲದೆ ಜಾಲತಾಣಕ್ಕೆ ಅಪ್ಲೋಡ್ ಮಾಡಲಾಗಿದೆಯೇ ಎಂಬುದನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(8) ನ್ಯಾಯಾಲಯ ವ್ಯವಸ್ಥಾಪಕರು ಜಿಲ್ಲೆಯಲ್ಲಿನ ಮೊಕದ್ದಮೆಗಳ ಹೂಡಿಕೆ ಮತ್ತು ವಿಲೇವಾರಿ ಬಗೆಗಿನ ಎಲ್ಲಾ ಮಾಹಿತಿಯನ್ನು ರಾಷ್ಟ್ರೀಯ ನ್ಯಾಯಾಂಗ ದತ್ತಾಂಶ ಜಾಲಕ್ಕೆ ಒದಗಿಸತಕ್ಕದ್ದು.

(9) ನ್ಯಾಯಾಲಯ ವ್ಯವಸ್ಥಾಪಕರು ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಸಮನ್ವಯದೊಂದಿಗೆ ಲಿಪಿಕ ಸಿಬ್ಬಂದಿಗೆ ಕಂಪ್ಯೂಟರ್ ತರಬೇತಿಯನ್ನು ನೀಡಲು ಸಹಕರಿಸಕ್ಕದ್ದು.

ಬಿ. ಮೂಲಸೌಕರ್ಯ

(1) ನ್ಯಾಯಾಲಯ ವ್ಯವಸ್ಥಾಪಕರು, ನ್ಯಾಯಾಲಯದ ಹಿತಾಸಕ್ತಿದಾರರೊಂದಿಗೆ ಸಮಾಲೋಚಿಸಿ (ಬಾರ್, ಲಿಪಿಕ ಸಿಬ್ಬಂದಿ, ಅಭಿಯೋಜಕರು/ ಪೊಲೀಸ್/ ಪ್ರಕ್ರಿಯಾ ಸೇವೆ ಸಲ್ಲಿಸುವ ಏಜೆನ್ಸಿಗಳು ಮತ್ತು ನ್ಯಾಯಾಲಯ ಬಳಕೆದಾರರಂತಹ ನ್ಯಾಯಾಂಗ ಪ್ರಕಾರ್ಯಗಳನ್ನು ಬೆಂಬಲಿಸುವ ಕಾರ್ಯನಿರ್ವಾಹಕ ಏಜೆನ್ಸಿಗಳು ಸೇರಿದಂತೆ), ಐದು ವರ್ಷಗಳ ನ್ಯಾಯಾಲಯವಾರು ನ್ಯಾಯಾಲಯ ಅಭಿವೃದ್ಧಿ ಯೋಜನೆಯನ್ನು (ಸಿಡಿಪಿ) ವಾರ್ಷಿಕವಾಗಿ ಸಿದ್ಧಪಡಿಸತಕ್ಕದ್ದು ಮತ್ತು ನವೀಕರಿಸತಕ್ಕದ್ದು.

(2) ನ್ಯಾಯಾಲಯ ವ್ಯವಸ್ಥಾಪಕರು ಸಿಡಿಪಿ ಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ಅದರ ಪ್ರಗತಿಯ ಬಗ್ಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ವರದಿ ಮಾಡತಕ್ಕದ್ದು.

(3) ನ್ಯಾಯಾಲಯ ವ್ಯವಸ್ಥಾಪಕರು ಲೋಕೋಪಯೋಗಿ ಇಲಾಖೆ ಮತ್ತು ಇತರ ಪ್ರಾಧಿಕಾರಗಳೊಂದಿಗೆ ನ್ಯಾಯಾಲಯಗಳು ಮತ್ತು ವಸತಿ ಗೃಹಗಳ ಮೂಲಸೌಕರ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(4) ನ್ಯಾಯಾಲಯ ವ್ಯವಸ್ಥಾಪಕರು ಜಿಲ್ಲೆಯ ಮೂಲಸೌಕರ್ಯ ಅಭಿವೃದ್ಧಿಯ ಕುರಿತಾದ ಮಾಹಿತಿಯನ್ನು ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಗೆ ತಿಳಿಸತಕ್ಕದ್ದು.

ಸಿ. ದಾಖಲೆಗಳ ನಿರ್ವಹಣೆ

(1) ನ್ಯಾಯಾಲಯ ವ್ಯವಸ್ಥಾಪಕರು ವಿಲೇಯಾದ ವಿಷಯಗಳ ದಾಖಲೆಗಳನ್ನು ಯಾವುದೇ ವಿಳಂಬವಿಲ್ಲದೆ ಜಿಲ್ಲಾ ರೆಕಾರ್ಡ್ ರೂಮ್‌ಗೆ ರವಾನಿಸುವುದನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(2) ನ್ಯಾಯಾಲಯ ವ್ಯವಸ್ಥಾಪಕರು ಉಚ್ಚ ನ್ಯಾಯಾಲಯದ ನಿಯಮಗಳ ಅನುಸಾರ ದಾಖಲೆಗಳ ನಾಶಮಾಡುವುದನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(3) ನ್ಯಾಯಾಲಯ ವ್ಯವಸ್ಥಾಪಕರು ಸಂಬಂಧಪಟ್ಟ ಶಿರಸ್ತೇದಾರ್‌ರ ಸಹಾಯದಿಂದ ನ್ಯಾಯಾಲಯದ ದಾಖಲೆಗಳ ನಿರ್ವಹಣೆ ಮತ್ತು ವರ್ಗೀಕರಣವನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

ಡಿ. ನಜರತ್ ವಿಭಾಗದ ಪರಿಶೀಲನೆ

ನ್ಯಾಯಾಲಯ ವ್ಯವಸ್ಥಾಪಕರು ನ್ಯಾಯಾಲಯಗಳ ಸೇವಾ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡಲು ನಜರತ್ ವಿಭಾಗದ ಸಾಪ್ತಾಹಿಕ ಪರಿಶೀಲನೆಯನ್ನು ಕೈಗೊಳ್ಳತಕ್ಕದ್ದು.

ಇ. ಶಿಷ್ಟಾಚಾರ ಕರ್ತವ್ಯ

(1) ನ್ಯಾಯಾಲಯ ವ್ಯವಸ್ಥಾಪಕರು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಇತರ ಗಣ್ಯರ ಭೇಟಿಯ ಸಮಯದಲ್ಲಿ ಶಿಷ್ಟಾಚಾರದ ಕರ್ತವ್ಯಗಳಿಗೆ ಹಾಜರಾಗತಕ್ಕದ್ದು.

(2) ನ್ಯಾಯಾಲಯ ವ್ಯವಸ್ಥಾಪಕರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಂದ ಅಗತ್ಯ ಸೂಚನೆಗಳನ್ನು ಪಡೆಯತಕ್ಕದ್ದು.

(3) ನ್ಯಾಯಾಲಯ ವ್ಯವಸ್ಥಾಪಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ಮೇಲೆ ಸರ್ಕ್ಯೂಟ್ ಹೌಸ್/ಅತಿಥಿ ಗೃಹದಲ್ಲಿ ನ್ಯಾಯಾಂಗ ಅಧಿಕಾರಿಗಳಿಗೆ ವಸತಿ ಸೌಕರ್ಯ ಕಲ್ಪಿಸಲಾಗಿರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

ಎಫ್. ಮಾನವ ಸಂಪನ್ಮೂಲ ನಿರ್ವಹಣೆ

ನ್ಯಾಯಾಲಯ ವ್ಯವಸ್ಥಾಪಕರು ಉಚ್ಚ ನ್ಯಾಯಾಲಯವು ಸ್ಥಾಪಿಸಿರುವ ಮಾನವ ಸಂಪನ್ಮೂಲ ನಿರ್ವಹಣಾ ಮಾನದಂಡ ಮತ್ತು ಪದ್ಧತಿಗಳ ಅನುಸರಣೆಗಾಗಿ ಕ್ರಿಯಾ ಯೋಜನೆಯನ್ನು ಶಿಫಾರಸು ಮಾಡತಕ್ಕದ್ದು.

ಜಿ. ಇನ್ನಿತರ ಕರ್ತವ್ಯಗಳು

(1) ನ್ಯಾಯಾಲಯ ವ್ಯವಸ್ಥಾಪಕರು ನ್ಯಾಯಾಲಯದ ವ್ಯವಸ್ಥಾಪನೆಗಾಗಿ ಉಚ್ಚ ನ್ಯಾಯಾಲಯವು ಸ್ಥಾಪಿಸಿದ ನೀತಿಗಳು ಮತ್ತು ಮಾನದಂಡಗಳಿಗೆ ಅನುಗುಣವಾಗಿ ಮಾಹಿತಿ ಮತ್ತು ದಸ್ತಾವೇಜುಗಳನ್ನು ಸಲ್ಲಿಸುವುದಕ್ಕಾಗಿ, ಪ್ರಮಾಣೀಕೃತ ಪ್ರತಿಗಳನ್ನು ನೀಡುವುದಕ್ಕಾಗಿ, ಅವುಗಳ ಲಭ್ಯತೆಗಾಗಿ ಮತ್ತು ಕುಂದುಕೊರತೆ ಪರಿಹಾರಕ್ಕಾಗಿ ನ್ಯಾಯಾಲಯದ ಪ್ರಕ್ರಿಯೆ ಮತ್ತು ಕಾರ್ಯವಿಧಾನಗಳನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(2) ನ್ಯಾಯಾಲಯ ವ್ಯವಸ್ಥಾಪಕರು ನ್ಯಾಯಾಲಯದ ಪ್ರಮುಖ ವ್ಯವಸ್ಥೆಗಳಾದ ದಸ್ತಾವೇಜುಗಳ ನಿರ್ವಹಣೆ, ಉಪಯುಕ್ತತೆಗಳ ನಿರ್ವಹಣೆ, ಮೂಲಸೌಕರ್ಯ ಮತ್ತು ಸೌಲಭ್ಯಗಳ ನಿರ್ವಹಣೆ, ಹಣಕಾಸು ವ್ಯವಸ್ಥೆಗಳ ನಿರ್ವಹಣೆ ಇತ್ಯಾದಿಗಳ ಪರಿಣಾಮಕಾರಿ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

(3) ನ್ಯಾಯಾಲಯ ವ್ಯವಸ್ಥಾಪಕರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಸೂಚನೆಗಳ ಮೇರೆಗೆ ನ್ಯಾಯಾಲಯದ ಆವರಣದ ಸ್ವಚ್ಛತೆಯನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು ಮತ್ತು ನ್ಯಾಯಾಲಯದ ಆವರಣದ ಸುತ್ತಮುತ್ತಲಿನ ಪರಿಸರವನ್ನು ಸುಧಾರಿಸಲು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(4) ನ್ಯಾಯಾಲಯ ವ್ಯವಸ್ಥಾಪಕರು ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದಿಂದ ಬರುವ ಎಲ್ಲಾ ಸಂವಹನಗಳನ್ನು/ಪತ್ರಗಳನ್ನು, ಸೂಕ್ತವಾದ ಟಿಪ್ಪಣಿಯೊಂದಿಗೆ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮುಂದೆ ಮಂಡಿಸತಕ್ಕದ್ದು ಮತ್ತು ಸೂಚನೆಗಳ ಅನುಸಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(5) ನ್ಯಾಯಾಲಯ ವ್ಯವಸ್ಥಾಪಕರು ನ್ಯಾಯಾಲಯಗಳಲ್ಲಿ ಮತ್ತು ನ್ಯಾಯಾಂಗ ಅಧಿಕಾರಿಗಳ ವಸತಿ ಗೃಹಗಳಲ್ಲಿ ವಿದ್ಯುತ್ ಸೌಲಭ್ಯ, ದೂರವಾಣಿ, ಅಂತರ್ಜಾಲ ಸಂಪರ್ಕದ ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕದ್ದು.

ಅನುಸೂಚಿ-II

ಕ್ರಮ ಸಂ ಖ್ಯೆ	ನ್ಯಾಯಾಲಯ ವ್ಯವಸ್ಥಾಪಕರ ಹೆಸರು	ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳ	ಜನ್ಮ ದಿನಾಂಕ	ಎಂಬಿಎ ವಿದ್ಯಾರ್ಹತೆಯಲ್ಲಿ ಪಡೆದ ಶೇಕಡಾವಾರು ಅಂಕ	ಸೇವೆಗೆ ಸೇರಿದ ದಿನಾಂಕ	ವಿದ್ಯಾರ್ಹತೆ	ಜಾತಿ
2013							
1	ಶ್ರೀ ಶಿವಕುಮಾರ್	ಬೀದರ್	01.06.1977	72	11.07.2013	ಎಂಬಿಎ	ಕ್ರಿಶ್ಚಿಯನ್ ಪ್ರವರ್ಗ-IIIಬಿ
2	ಶ್ರೀ ಸುಭಾಷ್‌ಚಂದ್ರ ಶಂಕಣ್ಣವರ್	ದಕ್ಷಿಣ ಕನ್ನಡ ಮಂಗಳೂರು	28.01.1979	59.55	19.07.2013	ಬಿಬಿಎ ಮತ್ತು ಎಂಬಿಎ	ಹಿಂದೂ ಲಿಂಗಾಯತ್

3	ಶ್ರೀ. ಸುರೇಶ್ ರಾಠೋಡ್	ಬೆಳಗಾವಿ	11.06.1977	53	12.07.2013	ಎಂಬಿಎ	ಬಂಜಾರ (ಲಂಬಾಣಿ)
4	ಶ್ರೀ ಅನಿಲ್ ಕುಮಾರ್ ಡಿ.	ರಾಮನಗರ	22.02.1980	63	19.08.2013	ಬಿಬಿಎಂ ಮತ್ತು ಎಂಬಿಎ	ಕುಂಚಿಟಿಗ III-ಎ
5	ಶ್ರೀ ಕಟ್ಟೆ ಬಸಪ್ಪ ಹೆಚ್	ಕೊಪ್ಪಳ	16.03.1979	61.83	11.09.2013	ಬಿ.ಕಾಮ್ ಎಂಬಿಎ (ಹಣಕಾಸು ಮತ್ತು ಮಾರುಕಟ್ಟೆ) ಎಲ್ಎಲ್ಬಿ ವ್ಯಾಸಂಗ	ಬಣಜಿಗ III-ಬಿ
6	ಶ್ರೀ ಪ್ರವೀಣ್ ಕುಮಾರ್ ಹೀರೇಮಠ್,	ರಾಯಚೂರು	15.08.1982	57	10.07.2013	ಬಿ.ಎಸ್ಸಿ, ಎಂಬಿಎ, ಬಿ.ಇಡಿ	ಲಿಂಗಾಯತ್ ಪ್ರವರ್ಗ-IIIಬಿ
7	ಶ್ರೀ ರಂಗನಾಥ್ ಕಾಳೆ	ವಿಜಯಪುರ	20.06.1976	55	10.07.2013	ಬಿ.ಕಾಮ್ ಮತ್ತು ಎಂಬಿಎ	ಹೊಲೇರ್ (ಪ.ಜಾ)
2014							
8	ಶ್ರೀ ವಿಜಯಮಹಾಂತ ಸ್ವಾಮಿ	ಬೆಂಗಳೂರು ಗ್ರಾಮೀಣ	07.06.1975	61.67	23.06.2014	ಎಂ.ಎ (ಇಂಗ್ಲಿಷ್) ಎಂಬಿಎ (ಮಾನವ ಸಂಪನ್ಮೂಲ ಮತ್ತು ಆಡಳಿತ)	ಹಿಂದೂ ವೀರಶೈವ
9	ಶ್ರೀ ರಾಮ್ ಗೌಡ ಎಂ	ಮೈಸೂರು	04.05.1984	67.21	25.06.2014	ಎಲ್ಎಲ್ಬಿ. ಎಂಬಿಎ (ಹಣಕಾಸು ಮತ್ತು ಮಾರುಕಟ್ಟೆ) ಮತ್ತು ಎಲ್ಎಲ್ಎಂ (ವ್ಯವಹಾರಿಕ ಕಾನೂನು)	ಗೌಡ ಪ್ರವರ್ಗ III-(ಎ)
10	ಶ್ರೀ ಬೀರಪ್ಪ ಡೋಣಿ	ಬಾಗಲಕೋಟೆ	08.06.1984	57.1	19.06.2014	ಬಿ.ಕಾಮ್ ಎಂಬಿಎ ಪಿಜಿಡಿಸಿಎ	ಹಿಂದೂ ಕುರುಬ ಪ್ರವರ್ಗ-II(ಎ)

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

11	ಶ್ರೀ. ರವೀಂದ್ರ ಕೆ. ಪಾಟೀಲ್	ಕಲಬುರ್ಗಿ	12.04.1981	63	01.07.2014	ಎಂಬಿಎ	ವೀರಶೈವ ಲಿಂಗಾಯತ್
12	ಶ್ರೀ. ಈರೇಶ್ ಎ.	ಬಳ್ಳಾರಿ	16.10.1979	61.68	26.06.2014	ಎಂಬಿಎ ಮತ್ತು ಬಿಬಿಎಂ (ಹಣಕಾಸು)	ಹಿಂದೂ ಲಿಂಗಾಯತ್
13	ಶ್ರೀ. ಜೈನುಲ್ ಅಬಿದೀನ್ ತುರ್ಕಿ	ಧಾರವಾಡ	20.05.1985	60.62	26.06.2014	ಎಂಬಿಎ (ಮಾರುಕಟ್ಟೆ)	ಮುಸ್ಲಿಂ
14	ಶ್ರೀಮತಿ. ನಂದಿನಿ ಜಿ. ಜೆ.	ಮಂಡ್ಯ	24.08.1985	64.13	04.07.2014	ಬಿ. ಕಾಮ್ ಎಂಬಿಎ (ಹೆಚ್ಆರ್ ಮತ್ತು ಹಣಕಾಸು)	ಬಲಿಜ (ಬಣಜಿಗ)
15	ಶ್ರೀ. ಶಿವರಾಜ್	ಉಡುಪಿ	02.11.1979	57.2	25.09.2014	ಬಿ.ಕಾಮ್, ಎಂಬಿಎ	ಹಿಂದೂ ಲಿಂಗಾಯತ್

ಕರ್ನಾಟಕದ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/-
(ಪ್ರಭಾವತಿ ಟಿ.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ
ಇಲಾಖೆ (ಆಡಳಿತ-1)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH